Date : 26-9-2015

# ಬ್ರೆಜಿಲ್‌ನಲ್ಲಿ ಸಕ್ಕರೆ ಉತ್ಪಾದನೆ ಕುಂಠಿತ

ಬ್ರೆಜಿಲ್‌ನ ಪ್ರಮುಖ ಕಬ್ಬು ಬೆಳೆಯುವ ಪ್ರದೇಶವಾದ ಕೇಂದ್ರ ದಕ್ಷಿಣ ಪ್ರದೇಶದಲ್ಲಿ ಈ ವರ್ಷದ ಕಬ್ಬು ಕಟಾವಿನ ಉತ್ಪಾದನೆ ಕಳೆದ ಸೀಜನ್‌ಗಿಂತ 11 ಶೇಕಡಾ ಕಡಿಮೆಯಾಗಿದೆಯೆನ್ನಲಾಗಿದೆ. ಬ್ರೆಜಿಲ್ ಕಬ್ಬು ಅರೆಯುವಿಕೆಯಲ್ಲಿ ಶೇಕಡಾ 90 ರಷ್ಟಿರುವ ಈ ಪ್ರದೇಶದ ಕಬ್ಬು ಅರೆಯುವಿಕೆಯಲ್ಲಿ ಈ ತಿಂಗಳ ಪ್ರಥಮಾರ್ಧದ ಉತ್ಪಾದನೆ ಹಿಂದಿನ ಈ ಅವಧಿಯ ಉತ್ಪಾದನೆಗಿಂತ 26 ಶೇಕಡಾ ಕಡಿಮೆಯಾಗಿ 29.58 ಎಂ ಟನ್‌ಗಳಾಗಿದೆಯೆಂದು ಕೈಗಾರಿಕಾ ಗ್ರೂಪ್‌ನ ಯುನಿಕಾ ಹೇಳಿದೆ. ಜಡಿಮಳೆಯಿಂದ ಕಟಾವು ತೀವ್ರವಾಗಿ ಬಾಧಿತವಾಗಿದೆಯೆಂದು ಅದು ಹೇಳಿದೆ.

ಪ್ರಮುಖ ರಾಜ್ಯವಾದ ಸಾವ್ ಪಾವ್ಲೊದಲ್ಲಿ ಕಡಿಮೆ ಸಾಧನೆಯಾಗಿ 2015–16 ಅವಧಿಗೆ ಇನ್ನೂ 403.81 ಎಂ.ಟನ್ ಕಬ್ಬು ಅರೆಯಲು ಬಾಕಿ ಇದೆಯೆನ್ನಲಾಗಿದೆ. ಇದು ಹಿಂದಿನ ವರ್ಷದ ಈ ಅವಧಿಯಲ್ಲಿದ್ದ 412.62 ಎಂ ಟನ್‌ಗಿಂತ ಕಡಿಮೆ.

ಸಪ್ಟೆಂಬರ್ ತಿಂಗಳ ಪ್ರಥಮಾರ್ಧದಲ್ಲಿ ಸಕ್ಕರೆ ಕಾರ್ಖಾನೆಗಳು ಕಬ್ಬಿನ ಹೆಚ್ಚಿನ ಭಾಗವನ್ನು ಇಥೆನಾಲ್ ಉತ್ಪಾದನೆಗೆ ಬಳಸಿದ್ದಾರೆನ್ನಲಾಗಿದೆ. ಶೇಕಡಾ 60 ಪಾಲು ಇಥೆನಾಲ್ ಉತ್ಪಾದನೆಗೆ ಹಾಗೂ ಉಳಿದ 40 ಭಾಗವನ್ನು ಸಕ್ಕರೆ ಉತ್ಪಾದಿಸಲು ಬಳಸಿದ್ದಾರೆನ್ನಲಾಗಿದೆ. ರಿಯಲ್‌ನ ಅಪಮೌಲ್ಯದ ಹೊರತಾಗಿಯೂ ಸಕ್ಕರೆ ಉತ್ಪಾದನೆ, ಬ್ರೆಜಿಲ್‌ನ ರಫ್ತಿನ ಪ್ರಮುಖ ಭಾಗವಾಗಿರುವುದರಿಂದ, ಬ್ರೆಜಿಲ್‌ನ ಆರ್ಥಿಕತೆಯ ಅಭಿವೃದ್ಧಿಯಲ್ಲಿ ಇಥೆನಾಲ್ ಉತ್ಪಾದನೆಗಿಂತ ಸಕ್ಕರೆ ಉತ್ಪಾದನೆಯ ಪಾತ್ರ ಪ್ರಮುಖವಾಗಿದೆ. ಇಥೆನಾಲ್ ಹೆಚ್ಚಾಗಿ ಆಂತರಿಕವಾಗಿಯೂ ಬಳಕೆಯಾಗುತ್ತಿದೆ. ಆದರೂ ಸಂಖ್ಯೆಗಳ ಆಧಾರದಲ್ಲಿ ಕಾರ್ಖಾನೆಗಳು ಸಕ್ಕರೆ ಉತ್ಪಾದನೆಗಿಂತ ಹೆಚ್ಚಾಗಿ ಇಥೆನಾಲ್ ಉತ್ಪಾದನೆಗೆ ಆದ್ಯತೆ ಕೊಡುತ್ತಿದ್ದಾರೆಂದು ಯುನಿಕಾ ಟೆಕ್ನಿಕಲ್ ಡೈರೆಕ್ಟರ್ ಆಂಟಾನಿಯೋ ಡಿ ಪಾದ್ವ ರೊಡ್ರಿಗಸ್ ಹೇಳಿದ್ದಾರೆ.

ಸಪ್ಟೆಂಬರ್ ಪ್ರಥಮಾರ್ಧದಲ್ಲಿ ಬ್ರೆಜಿಲ್‌ನ ಒಟ್ಟು ಸಕ್ಕರೆ ಉತ್ಪಾದನೆ 1.68 ಎಂ. ಟನ್ ಆಗಿದ್ದು ಇದು ಹಿಂದಿನ ವರ್ಷದ ಈ ಅವಧಿಗಿಂತ 33 ಶೇಕಡಾ ಕಡಿಮೆಯಾಗಿದೆ. 2015–2016ರ ಎಪ್ರಿಲ್ ಆರಂಭದಿಂದ ಈ ವರೆಗೆ ಕೇಂದ್ರ ದಕ್ಷಿಣ ಪ್ರದೇಶದ ಒಟ್ಟು ಸಕ್ಕರೆ ಉತ್ಪಾದನೆ ಹಿಂದಿನ ವರ್ಷದ ಇದೇ ಅವಧಿಗಿಂತ 10.9 ಶೇಕಡಾ ಇಳಿಕೆಯಾಗಿ 20.89 ಎಂ ಟನ್‌ಗಳಾಗಿದೆಯೆನ್ನಲಾಗಿದೆ.